ದಿನಾಂಕ: **27-10-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
**ಪಾಟೀ ಸವಾಲುಃ- ವಾದಿಯ ಪರ ಶ್ರೀ. ಎಂ. ಎನ್, ವಕೀಲರಿಂದ:-**

**01.** ನಿಮಗೆ ಮಾಗಡಿ ಗ್ರಾಮದ ಸರ್ವೆ ನಂ.253/2ರಲ್ಲಿ 31 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಾವಾಸ್ವತ್ತಿಗೆ ನೀಡಿರುವ ಚೆಕ್ಕುಬಂಧಿಯು ಸರಿಯಾಗಿ ಇದೆ. ನಿಮಗೆ ವಾದಿಯು ಎಷ್ಟು ವರ್ಷಗಳಿಂದ ಪರಿಚಯವಿದ್ದಾರೆ ಎಂದರೆ ಸಾಕ್ಷಿಯು ತಾನು ಅವರನ್ನು ನೋಡಿಲ್ಲ ಎನ್ನುತ್ತಾರೆ. ಈ ದಾವೆಯಲ್ಲಿ ನನಗೆ ಸಮನ್ಸ್ ಜಾರಿಯಾದ ನಂತರ ವಾದಿಯು ಯಾರು ಎಂದು ನನಗೆ ಗೊತ್ತಾಯಿತು. ವಾದಿಯು ನಾನು ಅವರಿಂದ ಹಣವನ್ನು ಪಡೆದುಕೊಂಡಿದ್ದೇನೆ ಎಂದು ಹೇಳಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯು ನಾನು ಅವರಿಂದ ಎರಡುವರೆ ಲಕ್ಷ ಹಣವನ್ನು ಪಡೆದುಕೊಂಡಿದ್ದೇನೆ ಎಂದು ಹೇಳಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಯಾವ ಕಾರಣಕ್ಕಾಗಿ ನೀವು ವಾದಿಯಿಂದ ಹಣವನ್ನು ಪಡೆದುಕೊಂಡಿದ್ದೀರಾ ಎಂದು ಈ ದಾವೆಯಲ್ಲಿ ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ವಾದಿಯು ಯಾವ ಕಾರಣಕ್ಕಾಗಿ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದು ನಿಮಗೆ ಖುದ್ದಾಗಿ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

02. ಈ ಮೇಲೆ ಹೇಳಿರುವ 31 ಗುಂಟೆ ಸ್ವತ್ತು ವ್ಯವಸಾಯದ ಜಮೀನು ಆಗಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪ್ರಸ್ತುತವಾಗಿ ಸದರಿ ಸ್ವತ್ತಿನ ಮೌಲ್ಯ ಸುಮಾರು 90 ಲಕ್ಷ ಇದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಒಂದು ಗುಂಟೆ ಸ್ವತ್ತಿನ ಮೌಲ್ಯ ಎಷ್ಟು ಎಂದು ನನಗೆ ಗೊತ್ತಿಲ್ಲ. ನಿಪಿ-1 ಮತ್ತು ಅದರಲ್ಲಿ ಇರುವ ನನ್ನ ಸಹಿಯನ್ನು ಸೃಷ್ಟಿ ಮಾಡಿದ್ದಾರೆ ಎಂದು ನನ್ನ ಪ್ರತಿವಾದಪತ್ರದಲ್ಲಿ ಹೇಳಿರುತ್ತೇನೆ ಮತ್ತು ಅದಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ಕಾನೂನು ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ನನ್ನ ಯಜಮಾನರು ಹೋಟಲ್ ನಲ್ಲಿ ಕೆಲಸವನ್ನು

ಮಾಡುತ್ತಾರೆ. ನಾನು ಬೇರೆಯವರ ಮನೆ ಕೆಲಸವನ್ನು ಮಾಡುತ್ತೇನೆ. ನನಗೆ ಒಟ್ಟು 3 ಜನ ಮಕ್ಕಳು ಇದ್ದಾರೆ. ನನ್ನ ಮತ್ತು ನನ್ನ ಯಜಮಾನರ ಸಂಪಾದನೆಯಿಂದ ನನ್ನ ಮನೆಯನ್ನು ನಡೆಸಲು ಆಗುತ್ತದೆ. ನನ್ನ ಮಕ್ಕಳು ವಿದ್ಯಭ್ಯಾಸವನ್ನು ಮಾಡುತ್ತಿಲ್ಲ.

**ಈ ಹಂತದಲ್ಲಿ ಮುಂದುವರೆದ** ಪಾಟೀ **ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**